**ಸಿ.ಸಿ.ನಂ.: 1566/2022**

ಪಿ.ಡಬ್ಲ್ಯೂ: 1

(ಇಂದು ದಿನಾಂಕಃ **06-03-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟಿ ಸವಾಲು ಶ್ರೀ ವೈ ಆರ್ ಎಂ ವಕೀಲರಿಂದ**

ಸಾಲವನ್ನು ನೀಡುವ ಸಮಯದಲ್ಲಿ ಸಾಲದ ಅರ್ಜಿ ಪ್ರಮುಖ ದಾಖಲೆ ಎಂದರೆ ಸರಿ . ಸಾಲದ ಅರ್ಜಿಯಲ್ಲಿ ಒಂದಾನು ವೇಳೆ ಅಪೂರ್ಣವಾಗಿ ಭರಣವಾಗಿದ್ದರೆ ಅದರ ಸಂಪೂರ್ಣ ಜವಾಬ್ದಾರಿ ನಮ್ಮ ಶಾಖಾ ವ್ಯವಸ್ಥಾಪಕರಾಗಿರುತ್ತದೆ ಎಂದರೆ ಸರಿ. ಈ ಪ್ರಕರಣದ ಸಾಲದ ಅರ್ಜಿ ಬಂದ ಸಂದರ್ಬದಲ್ಲಿ ನನ್ನ ಹಿಂದನ ಶಾಖಾ ವ್ಯವಸ್ಥಾಪಕರು ಸದರಿ ಸಾಲದ ಅರ್ಜಿಯನ್ನು ಪರಿಶೀಲಿಸಿರುತ್ತಾರೆ. ಸದರಿ ಶಾಖಾ ವ್ಯವಸ್ಥಾಪಕರು ನಿರ್ವತ್ತರಾಗಿದ್ದು ಈಗ ನಾನು ದಾಖಲೆಗಳನ್ನು ಪರಿಶೀಲಿಸಿ ಈ ಪ್ರಕರಣದ ಕುರಿತಾಗಿ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ . ನಾನು ಸಾಲದ ಅರ್ಜಿಯನ್ನು ನೋಡಿದ ಸಮಯದಲ್ಲಿ ಸದರಿ ದಾಖಲಾತಿಯು ಸರಿಯಾಗಿ ಇತ್ತು. ಆರೋಪಿತಳ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡ ಬಗ್ಗೆ ಸಾಲದ ಅರ್ಜಿಯಲ್ಲಿ ನಮೂದು ಮಾಡಿರುತ್ತೇವೆ. ನಿಪಿ 7 ರಲ್ಲಿ ಆರೋಪಿತಳ ವ್ಯವಹಾರದ ಕುರಿತಾಗಿ ಎಲ್ಲೂ ನಮೂದಾಗಿಲ್ಲಾ ಎಂದರೆ ಸಾಕ್ಷಿಯು ಸಾಲವನ್ನು ವ್ಯಾಪಾರಕ್ಕಾಗಿ ಪಡೆದುಕೊಂಡಿರುತ್ತಾರೆ ಎಂದು ನಮೂದಾಗಿದೆ ಎಂದು ನುಡಿಯುತ್ತಾರೆ. ಸದರಿ ವ್ಯಾಪಾರವು ಯಾವುದು ಎಂದು ನಿರ್ಧಿಷ್ಟವಾಗಿ ನಿಪಿ 7 ರಲ್ಲಿ ನಮೂದಿಸಿಲ್ಲಾ ಎಂದರೆ ಸರಿ .

ಸಾಲದ ಅರ್ಜಿಯಲ್ಲಿ ಸಾಲದ ಉದ್ದೇಶ ಅದಕ್ಕೆ ಸಂಬಂಧಪಟ್ಟಂತಹ ದಾಖಲಾತಿಯನ್ನು ಪಡೆದುಕೊಂಡರೆ ಮಾತ್ರ ಸಾಲ ಮಂಜೂರು ಆಗುತ್ತದೆ ಎಂದರೆ ಸರಿ . ಸಾಲಗಾರಳ ಗಂಡನ ವ್ಯವಹಾರದ ಕುರಿತಾಗಿ ದಾಖಲಾತಿಯನ್ನು ಪಡೆದುಕೊಂಡ ಬಗ್ಗೆ ಎಲ್ಲೂ ನಮೂದು ಮಾಡಿಲ್ಲಾ ಎಂದರೆ ಸರಿ. ಈ ಪ್ರಕರಣದ ಸಾಲದ ಅರ್ಜಿಯಲ್ಲಿ ಸಾಲವು ಮಂಜೂರಾಗಲಿಲ್ಲಾ ಎಂದರೆ ಸರಿಯಲ್ಲ ಒಂದಾನುವೇಳೆ ಸಾಲ ಮಂಜೂರಾಗಿದ್ದರೆ ವ್ಯಾಪಾರಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪಡೆದುಕೊಳ್ಳುತ್ತಿದ್ದವು ಎಂದರೆ ಸಾಕ್ಷಿಯು ಈ ಪ್ರಕರಣದ ಸಾಲವು ವೈಯಕ್ತಿಕ ಯೋಜನೆಯ ಅಡಿ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣದ ಸಾಲವು ಮಂಜೂರಾದ ಸಮಯದಲ್ಲಿ ಸಾಲಗಾರಳ ವೇತನ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇವೆ. ಸದರಿ ದಾಖಲಾತಿಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ . ನಾವು ಯಾವುದೇ ದಾಖಲಾತಿಗಳನ್ನು ಸಾಲಗಾರಳಿಂದ ಹಾಗೂ ಆಕೆಯ ಗಂಡನಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಒಂದಾನುವೇಳೆ ಸದರಿ ದಾಖಲಾತಿಗಳನ್ನು ಪಡೆದುಕೊಂಡಿದ್ದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇವು ಎಂದರೆ ಸಾಕ್ಷಿಯು ಪ್ರಕರಣಕ್ಕೆ ಸಂಬಂಧಪಟ್ಟಂತಹ ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರಕರಣದ ಸಾಲವು ಮಂಜೂರಾಗಿದೆ ಎಂದು ತಿಳಿಯಲು ಸಾಲದ ಠರಾವನ್ನು ನೋಡಿದಾಗ ತಿಳಿಯುತ್ತದೆ ಎಂದರೆ ಸರಿ .

ನಿಪಿ 7 ರ ಕಚೇರಿಯ ಹಿಂಬರಹದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಹಿಯನ್ನು ಹೊರತುಪಡಿಸಿ ಇತರ ಯಾವುದೇ ಮಾಹಿತಿಗಳನ್ನು ಹಾಗೂ ಸಾಲ ಎಷ್ಟು ಮೊತ್ತಕ್ಕೆ ಮಂಜೂರಾಗಿದೆ ಎಂಬ ಬಗ್ಗೆಯಾವುದೇ ವಿವರಗಳು ಇಲ್ಲಾ ಎಂದರೆ ಸರಿ . ಈರೀತಿಯಾಗಿ ಯಾವುದೇ ವಿಷಯವು ನಮೂದಾಗದೇ ಇರುವುದರಿಂದ ಠರಾವಿನಲ್ಲಿ ಈ ಕುರಿತಾಗಿ ಎಲ್ಲಾ ವಿವರಗಳು ನಮೂದಾಗಿರುತ್ತದೆ ಎಂದರೆ ಸರಿ . ಈ ರೀತಿಯಾಗಿ ಠರಾವು ನಮ್ಮ ಬಳಿ ಇಲ್ಲದೇ ಇದ್ದರೂ ಕೂಡಾ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಸಾಲದ ಅರ್ಜಿಯು ಅಪೂರ್ಣವಾಗಿದ್ದು ಈ ಪ್ರಕರಣದಲ್ಲಿ ಯಾವುದೇ ಸಾಲವು ಮಂಜೂರಾಗಿಲ್ಲಾ ಎಂದರೆ ಸರಿಯಲ್ಲ .

ಈ ಪ್ರಕರಣದ ಸಾಲದ ಸಂದಾಯವಾಗಿದೆ ಎಂಬುವುದನ್ನು ತೋರಿಸಲು ಯಾವುದೇ ಖಾತಾ ಉತಾರವನ್ನು ಹಾಜರುಪಡಿಸಿಲ್ಲಾ ಎಂದರೆ ಸಾಕ್ಷಿಯು ಸಾಲ ಸಂದಾಯವಾದ ಉತಾರವನ್ನು ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ನಿಪಿ 8 ರಲ್ಲಿ ಸ್ಥಳ , ದಿನಾಂಕ , ಸಾಕ್ಷಿದಾರರ ಹೆಸರು ಮತ್ತು ವಿಳಾಸ ಯಾವುದು ನಮೂದಾಗಿಲ್ಲಾ ಎಂದರೆ ಸರಿ . ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲರ ಮೂಲಕ ಹಾಗೂ ನಮ್ಮ ಬ್ಯಾಂಕಿನಿಂದ ನೋಟೀಸನ್ನು ನೀಡಲಿಲ್ಲ ಎಂದರೆ ಸರಿಯಲ್ಲ .

(**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಾಯಾವಕಾಶವನ್ನು ಕೋರಿದ್ದು, ಸಮಯಾವಾಕಾಶವನ್ನು ನೀಡಲಾಯಿತು**)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ